# ಸಂಪಾದಕೀಯ

# ತತ್ತ್ವಮಸಿ

## ಸುಷುಪ್ತಿಯ ಸ್ಥಿತಿ

**ಒಬ್ಬ ವ್ಯಕ್ತಿಯು** ತನ್ನ ಹಿಂದಿನ ಅನುಭವಗಳೊಡನೆ ತನ್ನ ಸಂಬಂಧವನ್ನು ಕಳೆದುಕೊಂಡರೆ, ಅವನ ಸ್ಮೃತಿಶಕ್ತಿಯೇ ನಾಶವಾದರೆ ಅವನು ತನ್ನನ್ನು ತಾನು ಗುರುತಿಸಿಕೊಳ್ಳಲಾರ—ತಾನಾರೆಂಬುದನ್ನೇ ಮರೆತುಬಿಡುತ್ತಾನೆ. ಒಬ್ಬ ವ್ಯಕ್ತಿ ಇತರರರನ್ನೂ ಇತರ ವಸ್ತುಗಳನ್ನೂ ಇತರ ವಿಷಯಗಳನ್ನೂ ಮರೆಯುವುದು ಸ್ವಾಭಾವಿಕ. ಆದರೆ ತನ್ನನ್ನೇ ಮರೆತುಬಿಡುವುದು ತುಂಬ ದುರಂತ. ತನ್ನನ್ನೇ ಮರೆತುಬಿಟ್ಟರೆ ಅವನು ತನ್ನನ್ನು ಯಾರೊಡನೆಯೂ ಯಾವುದರೊಡನೆಯೂ ಸಂಬಂಧಿಸಿಕೊಳ್ಳಲಾರ. ಅವನೊಬ್ಬ ಜಡವಸ್ತುವಿನಂತಾಗಿಬಿಡುತ್ತಾನೆ ಅಥವಾ ಒಂದು ಯಂತ್ರದಂತಾಗಿಬಿಡುತ್ತಾನೆ. ಯಂತ್ರ ತುಂಬ ಕೆಲಸ ಮಾಡುತ್ತದೆ, ಆದರೆ ಅದಕ್ಕೆ ತನ್ನತನವಿರುವುದಿಲ್ಲ. ಅದಕ್ಕೆ ಯಾರೊಡನೆಯೂ ಯಾವುದರೊಡನೆಯೂ ಪ್ರಜ್ಞಾಪೂರ್ವಕ ಸಂಬಂಧವಿರುವುದಿಲ್ಲ.

ನಾವೆಲ್ಲರೂ ಪ್ರತಿದಿನವೂ ಆ ಸ್ಥಿತಿಗೆ ಹೋಗುತ್ತೇವೆ. ಅಲ್ಲಿ ನಾವಾರೂ ನಾವಾಗಿರುವುದಿಲ್ಲ, ನಮ್ಮತನ ಹೊರಟುಹೋಗಿರುತ್ತದೆ. ಅಲ್ಲಿ ರಾಜನು ರಾಜನಲ್ಲ, ಆಳು ಆಳಲ್ಲ; ತಂದೆ ತಂದೆಯಲ್ಲ, ಪುತ್ರ ಪುತ್ರನಲ್ಲ. ಅಲ್ಲಿ ಜಾರ್ಜ್ ಬುಷ್ ಇಲ್ಲ, ಒಸಾಮಾ ಬಿನ್ ಲಾಡನ್ ಇಲ್ಲ. ಅಲ್ಲಿ ಯಾರ ಸಂಬಂಧವೂ ಇಲ್ಲ, ಯಾರಿಗೆ ಯಾರೂ ಇಲ್ಲ. ಯಾರಿಗೆ ಯಾರೂ ಶತ್ರುವಲ್ಲ, ಯಾರಿಗೆ ಯಾರೂ ಮಿತ್ರರಲ್ಲ. ಇದೇ ಸುಷುಪ್ತಿಯ ಸ್ಥಿತಿ. ಇದರ ಬಗ್ಗೆ ಉಪನಿಷತ್ತು ಹೀಗೆ ಹೇಳುತ್ತದೆ: ಅತ್ರ ಪಿತಾ ಅಪಿತಾ ಭವತಿ, ಮಾತಾ ಅಮಾತಾ, ಲೋಕಾ ಅಲೋಕಾಃ, ದೇವಾ ಅದೇವಾಃ ವೇದಾ ಅವೇದಾಃ| ಅತ್ರ ಸ್ತೇನೋಽಸ್ತೇನೋ ಭವತಿ, ಭ್ರೂಣಹಾ ಅಭ್ರೂಣಹಾ, ಚಾಂಡಾಲೋ ಅಚಾಂಡಾಲಃ, ಪೌಲ್ಕಸೋಽಪೌಲ್ಕಸಃ, ಶ್ರಮಣೋಽಶ್ರಮಣಃ, ತಾಪಸೋಽತಾಪಸಃ, ಅನನ್ವಾಗತಂ ಪುಣ್ಯೇನಾನನ್ವಾಗತಂ ಪಾಪೇನ, ತೀರ್ಣೋ ಹಿ ತದಾ ಸರ್ವಾಂಛೋಕಾನ್ ಹೃದಯಸ್ಯ ಭವತಿ || "ಸುಷುಪ್ತಿಯಲ್ಲಿ ತಂದೆಯು ತಂದೆಯಲ್ಲ, ತಾಯಿಯು ತಾಯಿಯಲ್ಲ, ಲೋಕಗಳು ಲೋಕಗಳಲ್ಲ, ದೇವತೆಗಳು ದೇವತೆಗಳಲ್ಲ, ವೇದಗಳು ವೇದಗಳಲ್ಲ. ಈ ಅವಸ್ಥೆಯಲ್ಲಿ ಕಳ್ಳನು ಕಳ್ಳನಲ್ಲ, ಭ್ರೂಣ ಹತ್ಯೆಯನ್ನು ಮಾಡಿದವನು ಭ್ರೂಣಘ್ನನಲ್ಲ, ಚಾಂಡಾಲನು ಚಾಂಡಾಲನಲ್ಲ, ಪೌಲ್ಕಸನು ಪೌಲ್ಕಸನಲ್ಲ, ಶ್ರಮಣನು ಶ್ರಮಣನಲ್ಲ, ತಾಪಸನು ತಾಪಸನಲ್ಲ; (ಈ ರೂಪಕ್ಕೆ) ಪುಣ್ಯದ ಸೋಂಕಿಲ್ಲ, ಪಾಪದ ಸೋಂಕಿಲ್ಲ. ಏಕೆಂದರೆ ಆಗ ಅವನು ಬುದ್ಧಿಯ ಶೋಕಗಳನ್ನೆಲ್ಲ ದಾಟಿರುತ್ತಾನೆ."(ಬೃಹದಾರಣ್ಯಕ ಉಪನಿಷತ್ತು ೪.೩. ೨೨)

> ಶಿಲ್ಪೆಯೊಳಗಣ ಪಾವಕದಂತೆ,
> ಉದಕದೊಳಗಣ
> ಪ್ರತಿಬಿಂಬದಂತೆ, ಬೀಜದೊಳಗಣ
> ವೃಕ್ಷದಂತೆ, ಶಬ್ದದೊಳಗಣ
> ನಿಶ್ಶಬ್ದದಂತೆ ಗುಹೇಶ್ವರಾ, ನಿಮ್ಮ
> ಶರಣ ಸಂಬಂಧ !
> — *ಅಲ್ಲಮಪ್ರಭು.*

## ಎಲ್ಲವೂ ಆಗುವುದು

ಸಮಯ ನಮ್ಮನ್ನು ಎಚ್ಚರಿಸುತ್ತದೆ. ಆಗ ನಮ್ಮ ಅರಿವು ನಮಗೆ ಉಂಟಾಗಿ ತಂದೆಯಾಗಿಯೊ, ಪುತ್ರನಾಗಿಯೊ, ಅಧ್ಯಕ್ಷನಾಗಿಯೊ, ಕಳ್ಳನಾಗಿಯೊ ನಮ್ಮ ವ್ಯಾವಹಾರಿಕ ಕಾರ್ಯಗಳಲ್ಲಿ ಮತ್ತೆ ತೊಡಗುತ್ತೇವೆ. ಇದು ಒಂದು ರೀತಿಯ ಎಚ್ಚರ— ದೇಶ-ಕಾಲ-ನಿಮಿತ್ತದ ಪ್ರಪಂಚಕ್ಕೆ ನಾವು ಎಚ್ಚರಗೊಳ್ಳುವುದು. ಇದನ್ನು ಮೀರಿದ ಇನ್ನೊಂದು ಪ್ರಪಂಚವಿದೆ—ಅದೇ ಅಧ್ಯಾತ್ಮ ಪ್ರಪಂಚ. ಆ ಪ್ರಪಂಚಕ್ಕೆ ನಮ್ಮನ್ನು ಎಚ್ಚರಿಸುವವರು ಯಾರು? ಅಲ್ಲಿ ನಾವೇನಾಗಿರುತ್ತೇವೆ? ಸುಷುಪ್ತಿಯಲ್ಲಿ ನಾವು ಏನೂ ಆಗಿರುವುದಿಲ್ಲ, ವ್ಯಾವಹಾರಿಕ ಪ್ರಪಂಚಕ್ಕೆ ಬಂದಾಗ ನಾವು ವ್ಯಕ್ತಿಗಳಾಗುತ್ತೇವೆ—ಅಂಥವರು ಇಂಥವರು ಆಗುತ್ತೇವೆ. ಆಧ್ಯಾತ್ಮಿಕ ಪ್ರಪಂಚದಲ್ಲಿ ನಾವು ಸರ್ವವೂ ಆಗುತ್ತೇವೆ—ಏನೂ ಆಗಿರದ ಸ್ಥಿತಿಯಿಂದ ಎಚ್ಚೆತ್ತು ಏನೋ ಆಗಿ, ಕೊನೆಗೆ ಎಲ್ಲವೂ ಆಗುವುದು. ಹೀಗೆ ಎಲ್ಲವೂ ಆಗುವ ಸ್ಥಿತಿಗೆ ನಮ್ಮನ್ನು ಎಚ್ಚರಿಸುವ ಒಂದು ಪ್ರಸಿದ್ಧ ಹೇಳಿಕೆಯೇ "ತತ್ತ್ವಮಸಿ" (ತತ್-ತ್ವಂ-ಅಸಿ) ಎಂಬುವ ಮಹಾವಾಕ್ಯ.

ಈ ಮಹಾವಾಕ್ಯವು ಛಾಂದೋಗ್ಯ ಉಪನಿಷತ್ತಿನಲ್ಲಿ ಬರುತ್ತದೆ (೬.೮.೭): ಸ ಯ ಏಷೋಽಣಿಮಾ ಐತದಾತ್ಮ್ಯಮಿದಂ ಸರ್ವಂ ತತ್ ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ — "ಯಾವುದು ಸೂಕ್ಷ್ಮತಮವಾದ ಈ ಜಗನ್ಮೂಲವೊ ಅದರಿಂದಲೇ ಈ ಜಗತ್ತೆಲ್ಲವೂ ಆತ್ಮವಂತವಾಗಿದೆ. ಅದು ಸತ್ಯವು. ಅದು ಆತ್ಮನು. ಓ ಶ್ವೇತಕೇತು, ಅದು ನೀನೇ ಆಗಿರುವೆ." ಈ ಹೇಳಿಕೆ ಅಲ್ಲಿ ಒಂಬತ್ತು ಬಾರಿ ಬರುತ್ತದೆ.ಇದರ ಒಟ್ಟು ಅರ್ಥ ಜಗತ್ತಿನ ಹಿಂದಿರುವ ಸತ್ಯವೇ ವ್ಯಕ್ತಿಯ ಹಿಂದೆಯೂ ಇದೆ, ಅವೆರಡೂ ಸ್ವರೂಪತಃ ಒಂದೇ, ಬೇರೆಯಲ್ಲ.

## ವಿಷಯ ವಿಷಯಿ ಭೇದ

ಇಲ್ಲಿ ವಿಷಯ ಮತ್ತು ವಿಷಯಿಗಳ ಐಕ್ಯವನ್ನು ಹೇಳಲಾಗಿದೆ. ನಮ್ಮ ಹೊರಗಡೆ ವಿಷಯ ಜಗತ್ತಿದೆ. ಅದನ್ನು ನಾವು ಪಂಚ ಜ್ಞಾನೇಂದ್ರಿಯಗಳ ಮೂಲಕ ಅನುಭವಿಸುತ್ತೇವೆ ಮತ್ತು ಪಂಚ ಕರ್ಮೇಂದ್ರಿಯಗಳ ಮೂಲಕ ಅದರೊಡನೆ ವ್ಯವಹರಿಸುತ್ತೇವೆ. ಹೀಗೆ ನಮ್ಮ ಸಾಮಾನ್ಯ ಅನುಭವ ವಿಷಯ ಜಗತ್ತು ನಮ್ಮಿಂದ ಬೇರೆಯಾಗಿರುವಂತೆ ತೋರಿಸುತ್ತದೆ—ವಿಷಯ ಮತ್ತು ವಿಷಯಿ ಬೇರೆಯಾಗಿರುವಂತೆ ಕಂಡುಬರುತ್ತದೆ. ಆದರೆ ನಿಜವಾಗಿ ವಿಷಯ ವಿಷಯಿಗಳು ಯಾವುವು ಎಂಬುದನ್ನು ವಿಶ್ಲೇಷಿಸುತ್ತ ಹೋದರೆ ಅವೆರಡೂ ಏಕತೆಯಲ್ಲಿ ಕರಗಿ ಒಂದಾಗಿಬಿಡುತ್ತವೆ.

ಬಾಹ್ಯ ವಿಷಯವಸ್ತುವನ್ನು ನಾವು ವಿಶ್ಲೇಷಿಸುತ್ತ ಹೋದರೆ

ನಮಗೆ ಯಾವುದೇ ನಿರ್ದಿಷ್ಟ ವಸ್ತುವೂ ಸಿಕ್ಕುವುದಿಲ್ಲ. ಮೊದಲು ಸ್ಥೂಲ ವಸ್ತುವು ನಮಗೆ ಕಾಣಿಸುತ್ತದೆ. ಅದನ್ನು ವಿಶ್ಲೇಷಿಸಿದರೆ ಅದು ಬೇರೆ ಬೇರೆ ದ್ರವ್ಯಗಳಿಂದ ಆದುದೆಂದು ಕಂಡುಬರುತ್ತದೆ. ದ್ರವ್ಯಗಳನ್ನು ವಿಶ್ಲೇಷಿಸುತ್ತ ಹೋದರೆ ಅವು ಪರಮಾಣುಗಳಿಂದ ಕೂಡಿರುವುದಾಗಿ ಕಂಡುಬರುತ್ತದೆ. ಆ ಪರಮಾಣುಗಳನ್ನು ವಿಶ್ಲೇಷಿಸುತ್ತ ಹೋದರೆ ಅವು ಸೂಕ್ಷ್ಮ ಶಕ್ತಿಕಣಗಳಿಂದ (energy particles) ಕೂಡಿರುವುದು ತಿಳಿಯುತ್ತದೆ. ಹೀಗೆಯೇ ಮುಂದುವರಿಯುತ್ತ ಹೋದರೆ ನಿರ್ದಿಷ್ಟವಾಗಿ ಬೊಟ್ಟುಮಾಡಿ ತೋರಿಸಬಹುದಾದ ಯಾವುದೇ ವಸ್ತುವೂ ನಮ್ಮ ಗಮನಕ್ಕೆ ಬರುವುದಿಲ್ಲ. ಫ್ರಿಟ್ಜಾಫ್ ಕಾಪ್ರ ಹೇಳುತ್ತಾರೆ: "ಉಪ-ಪರಮಾಣು ಕಣಗಳು (*sub-atomic particles*) ನಿಜವಾಗಿಯೂ "ವಸ್ತು"ಗಳಲ್ಲ, ಆದರೆ ವಸ್ತುಗಳ ನಡುವಿನ ಪರಸ್ಪರ ಸಂಪರ್ಕಗಳು. ಈ ವಸ್ತುಗಳೂ ಕೂಡ ಬೇರೆ ವಸ್ತುಗಳ ನಡುವಿನ ಪರಸ್ಪರ ಸಂಪರ್ಕಗಳು. ಹೀಗೆ ಇದು ಮುಂದುವರಿಯುತ್ತದೆ. ಕ್ವಾಂಟಮ್ ಸಿದ್ಧಾಂತದಲ್ಲಿ ನಾವು ಯಾವುದೇ ವಸ್ತುಗಳನ್ನು ನಿರ್ದೇಶಿಸುವುದಿಲ್ಲ, ನಾವು ಪರಸ್ಪರ ಸಂಪರ್ಕಗಳನ್ನು ಕುರಿತೇ ವ್ಯವಹರಿಸುವುದು." (*The Web of Life*, p.30)

> ಪ್ರತ್ಯೇಕ ವಸ್ತುಗಳು ಅಸ್ತಿತ್ವದಲ್ಲಿವೆ ಎಂಬ ಭ್ರಮೆಯನ್ನು ನಾವು ಮೀರಿಹೋದರೆ, ಪ್ರತಿಯೊಂದು 'ವಸ್ತುವೂ'—ತನ್ನಷ್ಟಕ್ಕೇ ಅದು ಅಸತ್ಯವಾಗಿರುವುದರಿಂದ —ಇತರ ಎಲ್ಲ ವಸ್ತುಗಳನ್ನು ಒಳಗೊಳ್ಳುತ್ತದೆ ಅಥವಾ ಅವುಗಳಿಂದ ವ್ಯಾಪ್ತವಾಗಿರುತ್ತದೆ ಎಂಬ ಅನುಭವ ನಮಗುಂಟಾಗುತ್ತದೆ.
> —ಕೆನ್ ವಿಲ್ಬರ್, (*The Spectrum of Consciousness*, p. 72)

ನಮ್ಮ ಪಂಚೇಂದ್ರಿಯಗಳಿಗೆ ಗೋಚರವಾಗುವ ನಿರ್ದಿಷ್ಟ ರೂಪವುಳ್ಳ ಬಾಹ್ಯ ವಿಷಯವಸ್ತುಗಳೆಲ್ಲವೂ ಮನಸ್ಸಿನ ಸೃಷ್ಟಿ ಎಂದು ವೇದಾಂತ ಮತ್ತು ವಿಜ್ಞಾನಗಳೆರಡೂ ಹೇಳುತ್ತವೆ. ಆಲ್ಬರ್ಟ್ ಐನ್‌ಸ್ಟೈನ್ ಹೇಳುತ್ತಾರೆ, "ಭೌತಿಕ ಭಾವನೆಗಳೆಲ್ಲ ಮಾನವ ಮನಸ್ಸಿನ ಸ್ವತಂತ್ರ ಸೃಷ್ಟಿಗಳು, ಅವು ಎಷ್ಟೇ ಸ್ಪಷ್ಟವಾಗಿ ಕಾಣಿಸಿದರೂ ಅವುಗಳನ್ನು ಬಾಹ್ಯ ಜಗತ್ತಿನೊಡನೆ ಹೋಲಿಸಿ ನಿರ್ಧರಿಸಲಾಗುವುದಿಲ್ಲ. ಮನಸ್ಸು ತನ್ನ ಚಿತ್ರವನ್ನು ನಿಜವಾದ ಬಾಹ್ಯ ಸನ್ನಿವೇಶದೊಡನೆ ಹೋಲಿಸಲಾರದು, ಅಷ್ಟೇ ಅಲ್ಲದೆ ಅಂತಹ ಹೋಲಿಕೆಯ ಅರ್ಥದ ಸಾಧ್ಯತೆಯನ್ನೂ ಅದು ಕಲ್ಪಿಸಿಕೊಳ್ಳಲಾರದು." ಪ್ರಸಿದ್ಧ ಮನಶ್ಶಾಸ್ತ್ರಜ್ಞರೂ ಸಮಕಾಲೀನ ಚಿಂತಕರೂ ಆದ ಕೆನ್ ವಿಲ್ಬರ್ ಹೇಳುತ್ತಾರೆ: " ನೀವು ಚಿಂತಿಸುವಾಗ ವಸ್ತುಗಳನ್ನು ಸೃಷ್ಟಿಸುತ್ತೀರಿ." (T*hus, when you are thinking you are thinging*. The Spectrum of Consciousness, p. 71)

ಅಂದರೆ ಹೊರಗಿನ ವಿಷಯ ಜಗತ್ತು ನಮ್ಮ ಅನುಭವಕ್ಕೆ ಬರುತ್ತಿರುವಂತೆ ಇಲ್ಲ. ಅದರ ನಿಜವಾದ ಸ್ವರೂಪವೇ ಬೇರೆ. ಅದನ್ನೇ ವೇದಾಂತವು ಚೈತನ್ಯಸ್ವರೂಪ—ಏತದಾತ್ಮ್ಯಮಿದಂ ಸರ್ವಮ್—ಎನ್ನುತ್ತದೆ.

ಇದೇ ರೀತಿ ವಿಷಯಿಯ ವಿಶ್ಲೇಷಣೆಯೂ ನಮಗೆ ಯಾವುದೇ ನಿರ್ದಿಷ್ಟವಾದ ವಿಷಯಿ ಇಲ್ಲವೆಂಬುದನ್ನು ತೋರಿಸುತ್ತದೆ. ಬಾಹ್ಯ ವಿಷಯಗಳನ್ನು ನೋಡುವ ಇಂದ್ರಿಯಗಳನ್ನು ವಿಷಯಿ ಎಂದು ಪರಿಗಣಿಸಿದರೆ ಅವು ದೇಹದ ವಿವಿಧ ಭಾಗಗಳಾಗಿರುವುದರಿಂದ ವಿಷಯ ಜಗತ್ತಿಗೇ ಸೇರುತ್ತವೆ. ದೇಹವನ್ನು ಕಲ್ಪಿಸಿಕೊಳ್ಳುವ ಮನಸ್ಸನ್ನು ವಿಷಯಿ ಎಂದು ಪರಿಗಣಿಸೋಣವೆಂದರೆ ಮಾನಸಿಕ ವೃತ್ತಿಗಳು "ನಾನು" ಎಂಬುದಕ್ಕೆ ವಿಷಯವಾಗುತ್ತವೆ. ಈ "ನಾನು" ಎಂಬುದನ್ನು ವಿಶ್ಲೇಷಿಸುತ್ತ ಹೋದರೆ ಏನೂ ಉಳಿಯುವುದೇ ಇಲ್ಲ. ಇದನ್ನು ಶ್ರೀರಾಮಕೃಷ್ಣರು ಈರುಳ್ಳಿಯ ಉದಾಹರಣೆಯ ಮೂಲಕ ವಿವರಿಸಿದ್ದಾರೆ. ಆದ್ದರಿಂದ ವಿಷಯಿಯೂ ಯಾವುದೊ ಹಿನ್ನೆಲೆಯ ಸತ್ಯದಲ್ಲಿ ಕರಗಿಹೋಗುತ್ತದೆ. ಆ ಸತ್ಯವೇ ಆತ್ಮವೆಂದು ವೇದಾಂತ ಹೇಳುತ್ತದೆ.

ವಿಷಯಕ್ಕೆ ಸಂಬಂಧಿಸಿರುವ ವಸ್ತು ಭಾವವನ್ನೂ ವಿಷಯಿಗೆ ಸಂಬಂಧಿಸಿರುವ ವ್ಯಕ್ತಿಭಾವವನ್ನೂ ತೆಗೆದು ಹಾಕಿಬಿಟ್ಟರೆ ನಮಗೆ ಉಳಿಯುವುದು ಒಂದೇ ಆತ್ಮ. ಇದೇ "ತತ್ತ್ವಮಸಿ" ವಾಕ್ಯದ ಮುಖ್ಯಾರ್ಥ. ಅಂದರೆ ನೋಡುವ ಮತ್ತು ನೋಡಲ್ಪಡುವ ಎಂಬ ಎರಡು ಸತ್ಯಗಳಿಲ್ಲ—ಎರಡೂ ಒಂದೇ ಚೈತನ್ಯದ ವಿವಿಧ ರೂಪಗಳು. ವಿಜ್ಞಾನಿಗಳೂ ಇಂದು ಇದನ್ನೇ ಹೇಳುತ್ತಿರುವರು: "ಹೊರಗಡೆ ನಾವು ನೋಡುವ ಜಗತ್ತು ಮತ್ತು ಒಳಗಡೆ ನಾವು ನೋಡುವ ಜಗತ್ತು ಇವೆರಡೂ ಇಂದು ಒಂದಾಗುತ್ತಿರುವುವು. ಈ ಎರಡು ಜಗತ್ತುಗಳ ಏಕೀಕರಣವು ಬಹುಶಃ ಈ ಯುಗದ ಅತಿ ಮುಖ್ಯವಾದ ಸಾಂಸ್ಕೃತಿಕ ಘಟನೆಗಳಲ್ಲಿ ಒಂದು." (Ilya Prigogine, Quoted in *The Web of Life*, p. 193).

### ಭೌತಿಕವಾಗಿಯೂ ನಾವು ಒಂದು

ಇದು ಕೇವಲ ಆಧ್ಯಾತ್ಮಿಕವಾಗಿ ಮಾತ್ರವಲ್ಲ, ಭೌತಿಕ ಮತ್ತು ಮಾನಸಿಕವಾಗಿಯೂ ಹೌದು. ಭೌತಿಕವಾಗಿಯೂ ನಮಗೆ ಪ್ರತ್ಯೇಕವಾದ ಅಸ್ತಿತ್ವವಿಲ್ಲ, ನಮ್ಮ ದೇಹ ಒಟ್ಟು ಭೌತಿಕ ಜಗತ್ತಿನ ಅವಿಭಾಜ್ಯ ಅಂಗ. ನಮ್ಮ ದೇಹ ಬೇರೆ ವಸ್ತುಗಳಿಂದ ಮತ್ತು ದೇಹಗಳಿಂದ ಬೇರೆಯಾಗಿ ಕಂಡರೂ ನಿಜವಾಗಿಯೂ ಬೇರೆಯಲ್ಲ. ಸ್ಥೂಲದೃಷ್ಟಿಯಿಂದ ಹಾಗೆ ಕಾಣುತ್ತದೆ ಅಷ್ಟೆ. ಅತ್ಯಂತ ಸೂಕ್ಷ್ಮದರ್ಶಕ ಲೆನ್ಸಿನಿಂದ ನೋಡಿದರೆ ಈ ದೇಹ ಸುತ್ತಲಿನ ವಾತಾವರಣದೊಂದಿಗೆ ಒಂದಾಗಿಬಿಟ್ಟಿರುವುದು ಕಂಡುಬರುತ್ತದೆ. ಹಾಗೆಯೇ ಈ ಭೌತಿಕ ಜಗತ್ತಿನಲ್ಲಿ ಯಾವುದಕ್ಕೂ ಪ್ರತ್ಯೇಕವಾದ ಅಸ್ತಿತ್ವವಿಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ, ನಮ್ಮ ನಿಮ್ಮ ದೇಹಗಳೆಲ್ಲ ವಿಶ್ವ ಭೌತಸಾಗರದ ಚಿಕ್ಕ ಅಲೆಗಳು. ಸೂರ್ಯ ಬೃಹದಾಕಾರದ ಅಲೆ. ಸೂರ್ಯನಿಂದ ನಮ್ಮ ದೇಹಕ್ಕೂ ನಮ್ಮ ದೇಹದಿಂದ ಸೂರ್ಯನಿಗೂ ನಿರಂತರ ಕಣ ವಿನಿಮಯವಾಗುತ್ತಿರುತ್ತದೆ. ಇದೊಂದು ನಿರಂತರ ಭೌತ ಜಗತ್ತು. ನಾವು ಯಾವುದನ್ನು ಮೂರು ಆಯಾಮಗಳ ದೇಶ(*space*) ಎಂದು ಕರೆಯುತ್ತೇವೆಯೊ ಅದು ಕೇವಲ ಸಾಪೇಕ್ಷ, ನಮ್ಮ ದೈನಂದಿನ ವ್ಯವಹಾರಗಳಿಗೆ ಮಾತ್ರ

**ನಿಮ್ಮ ಆಲೋಚನೆಗಳು ಕೇವಲ ನಿಮ್ಮವು ಮಾತ್ರವಲ್ಲ. ಸಾಮಾನ್ಯ ಆಲೋಚನೆಗಳ ಸಾಗರಕ್ಕೆ ಅವು ಸೇರಿದವು. ಹಾಗೆಯೇ ಎಲ್ಲ ಚಿಂತಿಸುವ ಜೀವಿಗಳೂ ನಿಮ್ಮೊಂದಿಗೆ ಆ ಸಾಗರದ ನೀರನ್ನು ಹಂಚಿಕೊಳ್ಳುತ್ತವೆ.**

( Mikhail Naimy, *The Book of Mirdad*, p. 46 )

ಅನ್ವಯವಾಗುತ್ತದೆ. ನಿರಂತರವಾಗಿ ವ್ಯಾಪಿಸಿರುವ ಭೌತ ಜಗತ್ತನ್ನು ಅಳೆಯುವುದಾದರೂ ಹೇಗೆ? ಮತ್ತು ಯಾವುದರಿಂದ? ವಸ್ತುಗಳು ಪ್ರತ್ಯೇಕವಾಗಿದ್ದರೆ ಮಾತ್ರ ಅವುಗಳ ಉದ್ದ, ಅಗಲ, ಅಂತರ ಮುಂತಾದುವುಗಳನ್ನು ಅಳೆಯಬಹುದು. ಪ್ರತ್ಯೇಕತೆಯೇ ಇಲ್ಲದಿರುವಾಗ ಅಳೆಯಲ್ಪಡುವ ವಸ್ತು, ಅಳೆಯುವ ಸಾಧನ ಮತ್ತು ಅಳೆಯುವವನು ಎಲ್ಲ ಒಂದಾಗಿಬಿಡುತ್ತವೆ. ಆದ್ದರಿಂದ ಭೌತಿಕವಾಗಿಯಾದರೂ ನಾನು ಒಬ್ಬ ಪ್ರತ್ಯೇಕ ವ್ಯಕ್ತಿ ಎಂದು ಹೇಳಿಕೊಳ್ಳುವವನಿಗೂ ಉಪನಿಷತ್ತು ಹೇಳುತ್ತದೆ : **ತತ್ತ್ವಮಸಿ** —"ನೀನು ಅವೇ ಆಗಿದ್ದೀಯೆ," ನೀನು ಭೌತ ಜಗತ್ತಿನೊಂದಿಗೆ ಒಂದಾಗಿದ್ದೀಯೆ ಎಂದು ಹೇಳುತ್ತದೆ.

### ಸಮಾನತೆಯ ದೃಷ್ಟಿ

ನಾವು ಇತರರನ್ನು ಸಮಾನ ದೃಷ್ಟಿಯಿಂದ ಕಾಣುವುದಕ್ಕೆ ನಾವೇನೂ ಆಧ್ಯಾತ್ಮಿಕ ಮಟ್ಟಕ್ಕೆ ಏರಬೇಕಾಗಿಲ್ಲ. ಭೌತಿಕವಾಗಿಯೂ ನಾವೆಲ್ಲ ಒಂದೇ. ಇತರರಿಗೆ ಸಹಾಯ ಮಾಡಿದರೆ ನಮಗೆ ನಾವೇ ಸಹಾಯ ಮಾಡಿಕೊಂಡಂತೆ. ನಮ್ಮ ಸುತ್ತಲಿನ ಸಮಾಜ ಮತ್ತು ವಾತಾವರಣ ನಮ್ಮ ವ್ಯಕ್ತಿತ್ವದ ವಿಸ್ತರಣೆ ಅಷ್ಟೇ. ಅವುಗಳಿಗೆ ನಾವು ಹಾನಿ ಮಾಡಿದರೆ ಕೊನೆಗೆ ನಮಗೇ ಅದರಿಂದ ಹಾನಿಯುಂಟಾಗುತ್ತದೆ. ನಮ್ಮ ಸುಖ, ನಮ್ಮ ಆರೋಗ್ಯ ನಮ್ಮ ಸುತ್ತಲಿನ ಪರಿಸರವನ್ನು ಅವಲಂಬಿಸಿರುತ್ತವೆ. "ವ್ಯಕ್ತಿಯ ಜೀವನ ಸಮಷ್ಟಿಯ ಜೀವನವನ್ನು ಅವಲಂಬಿಸಿದೆ, ವ್ಯಕ್ತಿಯ ಸುಖ ಸಮಷ್ಟಿಯ ಸುಖವನ್ನು ಅವಲಂಬಿಸಿದೆ" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಒಂದು ಸರೋವರದಲ್ಲಿ ಒಂದು ಕಡೆ ವಿಷವನ್ನು ಹಾಕಿದರೂ ಅದು ಇಡೀ ಸರೋವರವನ್ನು ವಿಷಪೂರಿತವನ್ನಾಗಿ ಮಾಡುತ್ತದೆ. ಹಾಗೆಯೇ ಸಾಮಾಜಿಕ ಹಾನಿಯೂ ಕೂಡ. ಅದು ಒಂದು ಭಾಗದಲ್ಲಿ ಆದರೂ ಅದು ಇಡೀ ಸಮಾಜದ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುತ್ತದೆ. ಇದು ಇಂದಿನ ಸಾಮಾಜಿಕ ಸನ್ನಿವೇಶಕ್ಕೆ ಹೆಚ್ಚು ಅನ್ವಯವಾಗುತ್ತದೆ.

ಕ್ವಾಂಟಮ್ ವಿಜ್ಞಾನಿಗಳು ಹೇಳುತ್ತಾರೆ : "ವಂಚಿತರಾದ ಹೊರಗಿನವರೊಡನಿರುವ ಕ್ವಾಂಟಮ್ ಸಂಬಂಧವು ಕ್ರಾಂತಿಕಾರಿಯಾದ ನೈತಿಕ ಬದಲಾವಣೆಗೆ ಕರೆ ನೀಡುತ್ತದೆ. ನಾನು ಇತರರನ್ನು ಯಾಂತ್ರಿಕವಾಗಿ ನನಗಿಂತ ಬೇರೆ ಎಂದು ಪರಿಗಣಿಸಿದರೆ, ಅವರೊಡನೆ ನನಗಿರಬಹುದಾದ ನಿಕಟ ನೈತಿಕ ಸಂಬಂಧವೆಂದರೆ ನಾನು ಅವರನ್ನು ಇಟ್ಟುಕೊಂಡಿದ್ದೇನೆ ಎಂದಷ್ಟೇ ಆಗಿರುತ್ತದೆ. ಆದರೆ ಕ್ವಾಂಟಮ್ ಸಮಾಜದಲ್ಲಿ ನಾನು ಅವರನ್ನು ಇಟ್ಟುಕೊಂಡಿರುವುದಷ್ಟೇ ಅಲ್ಲ, ನಾನೇ ಅವರು."

### ಮಾನಸಿಕವಾಗಿಯೂ ನಾವು ಒಂದು

ಮಾನಸಿಕವಾಗಿಯೂ ನಮಗೆ ಯಾರಿಗೂ ಪ್ರತ್ಯೇಕ ಅಸ್ತಿತ್ವವಿಲ್ಲ. ನಾವೆಲ್ಲರೂ ವಿಶ್ವ ಮನಸ್ಸಿನ ಬೇರೆ ಬೇರೆ ಭಾಗಗಳು ಅಷ್ಟೇ. ನಮ್ಮ ಮತ್ತು ನಿಮ್ಮಲ್ಲಿ ಪ್ರತ್ಯೇಕವಾದ ಮನಸ್ಸುಗಳಿಲ್ಲ. ಆದ್ದರಿಂದಲೇ ಪರಸ್ಪರ ಭಾವವಿನಿಮಯ ಸಾಧ್ಯವಾಗುವಂತಹುದು. ಒಬ್ಬನ ಆಲೋಚನೆ ಇತರರ ಮೇಲೆ ಪ್ರಭಾವವನ್ನು ಉಂಟುಮಾಡುವುದು ಕೂಡ. ನಮ್ಮೊಳಗೆ ಮಾತ್ರವಲ್ಲದೆ ನಮ್ಮ ಸುತ್ತಲೂ ಆಲೋಚನಾ ತರಂಗಗಳಿವೆ. ಅವುಗಳಲ್ಲಿ ಒಳ್ಳೆಯ ಮತ್ತು ಕೆಟ್ಟ ತರಂಗಗಳಿರುತ್ತವೆ. ಅವು ನಮ್ಮ ಮೇಲೆ ಪ್ರಭಾವವನ್ನು ಉಂಟುಮಾಡುತ್ತವೆ—ನಾವು ಶುಭ ಸ್ಪಂದನದಲ್ಲಿರುವಾಗ ಶುಭ ಪ್ರಭಾವಕ್ಕೆ ಒಳಗಾಗುತ್ತೇವೆ, ಅಶುಭ ಸ್ಪಂದನದಲ್ಲಿರುವಾಗ ಅಶುಭ ಪ್ರಭಾವಕ್ಕೆ ಒಳಗಾಗುತ್ತೇವೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಾನು ಒಂದು ಕಾರ್ಯವನ್ನು ಮಾಡುತ್ತಿರುವಾಗ ನನ್ನ ಮನಸ್ಸು ಒಂದು ಸ್ಪಂದನ ಸ್ಥಿತಿಯಲ್ಲಿ ಇರುವುದೆಂದು ಹೇಳಬಹುದು. ಅದೇ ಸಮಾನ ಸ್ಥಿತಿಗಳಲ್ಲಿರುವ ಮನಸ್ಸುಗಳೆಲ್ಲಕ್ಕೂ ನನ್ನ ಮನಸ್ಸಿನ ಮೂಲಕ ಪರಿಣಾಮವನ್ನು ಪಡೆಯುವ ಪ್ರವೃತ್ತಿಯುಂಟು. ಒಂದು ಕೋಣೆಯಲ್ಲಿ ಒಂದೇ ಶ್ರುತಿಯುಳ್ಳ ನಾಲ್ಕಾರು ತಂತೀವಾದ್ಯಗಳಿದ್ದ ಪಕ್ಷದಲ್ಲಿ, ಅವುಗಳಲ್ಲಿ ಒಂದನ್ನು ಮೀಟಿದರೆ ಉಳಿದುವೆಲ್ಲವೂ ಕಂಪಿಸುತ್ತ, ಅದೇ ನಾದವನ್ನು ಕೊಡುವ ಸ್ವಭಾವವನ್ನು ಪಡೆದಿರುವುವೆಂಬ ವಿಷಯ ನಿಮ್ಮೆಲ್ಲರಿಗೂ ಗೊತ್ತಿರಬಹುದು. ಹೀಗಾಗುವುದಕ್ಕೆ ಎಲ್ಲ ವಾದ್ಯಗಳೂ ಒಂದೇ ಶ್ರುತಿಯಲ್ಲಿದ್ದು ಒಂದೇ ಪ್ರಚೋದನೆಯಿಂದ ಸಮಾನ ಪರಿಣಾಮವನ್ನು ಪಡೆದುದೇ ಕಾರಣ. ಈ ಪ್ರಕಾರವಾಗಿ ಒಂದೇ ಶ್ರುತಿಯಲ್ಲಿರುವ ಎಲ್ಲ ಮನಸ್ಸುಗಳೂ, ಒಂದೇ ಭಾವನೆಯಿಂದ ಸಮಾನ ಪರಿಣಾಮವನ್ನು ಹೊಂದುವುವು." (ವ್ಯಕ್ತಿತ್ವ ನಿರ್ಮಾಣ, ಪು. ೩೧). ಆದ್ದರಿಂದ ಮಾನಸಿಕವಾಗಿಯೂ "ತತ್ತ್ವಮಸಿ" ವಾಕ್ಯವು ಸಮರ್ಥನೀಯವಾಗುತ್ತದೆ.

### ಆಧ್ಯಾತ್ಮಿಕ ಏಕತೆ

ಇನ್ನು ಆಧ್ಯಾತ್ಮಿಕವಾಗಿ. ಮೂಲಭೂತವಾಗಿ ಈ ವಾಕ್ಯವು ಉಕ್ತವಾಗಿರುವುದು ಈ ಅರ್ಥದಲ್ಲಿಯೇ. ವ್ಯಕ್ತಿಯು ಕೇವಲ ಭೌತಿಕ ಮತ್ತು ಮಾನಸಿಕ ಮಟ್ಟದಲ್ಲಿ ನಿಲ್ಲಬಾರದು. ಈ ಕೆಳಗಿನ ಹಂತಗಳಲ್ಲಿ ಏಕತೆ ಎಷ್ಟೇ ಸಮರ್ಥನೀಯವಾದರೂ ಅದು ಜಡತ್ವದ ಏಕತೆ. ವೇದಾಂತದ ಪ್ರಕಾರ ಮನಸ್ಸೂ ಜಡವೇ. ಜಡಕ್ಕೆ ಏಕತೆಯ ಅರಿವು ಉಂಟಾಗುವುದಿಲ್ಲ—ಅದು ಒಂದೇ ಆಗಿದ್ದರೂ ತಾನು ಒಂದು ಎಂದು ಭಾವಿಸಲಾರದು. ಅರಿವು ಚೈತನ್ಯದ ರಾಜ್ಯಕ್ಕೆ ಸಂಬಂಧಿಸಿದುದು—ಅದೊಂದು ಚಿದಂಶ. ಭೌತಿಕ ಮತ್ತು ಮಾನಸಿಕ

ಹಂತದ ಏಕತೆಯ ಅರಿವು ಉಂಟಾಗುವುದೂ ಚೇತನಕ್ಕೇಯೇ. ನಾವು ಹೆಚ್ಚು ಹೆಚ್ಚು ಈ ಆತ್ಮಚೈತನ್ಯದೊಂದಿಗೆ ಒಂದಾಗಿಸಿಕೊಂಡಷ್ಟೂ ಹೆಚ್ಚು ಹೆಚ್ಚು ಈ ಏಕತೆಯ ಅರಿವು ನಮಗುಂಟಾಗುತ್ತದೆ. ಆಗ ಇತರರ ಭೌತಿಕ ಮತ್ತು ಮಾನಸಿಕ ಸುಖದುಃಖಗಳೂ ನಮ್ಮದೇ ಆಗಿ ಅನುಭವಕ್ಕೆ ಬರುತ್ತವೆ. ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ ರಂತಹ ಮಹಾಪುರುಷರ ಜೀವನದಲ್ಲಿ ಇಂತಹ ಸನ್ನಿವೇಶಗಳು ನಮಗೆ ಕಂಡುಬರುತ್ತವೆ. ಅವರು ವಿಷಯ ಮತ್ತು ವಿಷಯಿಗಳ ಹಿಂದಿರುವ ಏಕೈಕ ಚೈತನ್ಯತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡು ಎಲ್ಲವನ್ನೂ ಅವರು ಚೇತನಾತ್ಮಕವಾಗಿ ಕಾಣುತ್ತಾರೆ. ಗೌಡಪಾದಾಚಾರ್ಯರು ಹೇಳುತ್ತಾರೆ:

ತತ್ತ್ವಮಾಧ್ಯಾತ್ಮಿಕಂ ದೃಷ್ಟ್ವಾ ತತ್ತ್ವಂ ದೃಷ್ಟ್ವಾ ತು ಬಾಹ್ಯತಃ |
ತತ್ತ್ವೀಭೂತಃ ತದಾರಾಮಃ ತತ್ತ್ವಾದಪ್ರಚ್ಯುತೋ ಭವೇತ್ ||

"ತನ್ನೊಳಗಿರುವ ಮತ್ತು ಬಾಹ್ಯಜಗತ್ತಿನ ಹಿಂದಿರುವ ಏಕ ಆಧ್ಯಾತ್ಮಿಕ ತತ್ತ್ವವನ್ನು ಅರಿತುಕೊಂಡು, ಆ ತತ್ತ್ವದೊಡನೆ ಒಂದಾಗಿ, ಅದರಲ್ಲಿಯೇ ಆನಂದವನ್ನು ಪಡೆಯುತ್ತ ಆ ತತ್ತ್ವದಿಂದ ಎಂದಿಗೂ ಜಾರುವುದಿಲ್ಲ." (ಗೌಡಪಾದಕಾರಿಕಾ ೨.೩೮)

### ವೇದಾಂತದ ವಿವರಣೆ

ವೇದಾಂತದ ಪ್ರಕಾರ ತತ್-ತ್ವಂ-ಅಸಿ ವಾಕ್ಯದ "ತತ್" ಪದವು ಈಶ್ವರನನ್ನೂ "ತ್ವಂ" ಪದವು ಜೀವಾತ್ಮನನ್ನೂ ಸೂಚಿಸುತ್ತದೆ. ಸೀಮಿತ ಅಸ್ತಿತ್ವವುಳ್ಳ ಜೀವಾತ್ಮನೂ ಜಗದೊಡೆಯನಾದ ಈಶ್ವರನೂ ಒಂದೇ ಎಂದು ಹೇಳುವುದು ಧರ್ಮನಿಂದೆಯಲ್ಲವೇ ಎಂದು ಅನೇಕರು ಆಕ್ಷೇಪಿಸಬಹುದು. ಜೀವಾತ್ಮನ ದೇಹ, ಮನಸ್ಸು ಮುಂತಾದ ಉಪಾಧಿಗಳನ್ನೂ ಹಾಗೆಯೇ ವಿಶ್ವಸೃಷ್ಟಿ, ಒಡೆತನ ಮುಂತಾದ ಈಶ್ವರ ಸಂಬಂಧವಾದ ಉಪಾಧಿಗಳನ್ನೂ ತೆಗೆದುಬಿಟ್ಟರೆ ಕೊನೆಗುಳಿಯುವುದು ಇಬ್ಬರಿಗೂ ಸಮಾನವಾದ ಚೈತನ್ಯತತ್ತ್ವವೊಂದೇ. ಒಬ್ಬ ನಟನು ಇದ್ದಾನೆಂದು ಇಟ್ಟುಕೊಳ್ಳಿ. ಅವನು ಬೇರೆ ಬೇರೆ ನಾಟಕಗಳಲ್ಲಿ ರಾಮ, ಕೃಷ್ಣ ಮುಂತಾದ ಬೇರೆ ಬೇರೆ ಪಾತ್ರಗಳನ್ನು ವಹಿಸುತ್ತಾನೆ. ಅವನು ವಹಿಸುವ ಪಾತ್ರಗಳಿಗೆ ಸಂಬಂಧಿಸಿದ ವೇಷಭೂಷಣಗಳನ್ನು ತೆಗೆದು ಬಿಟ್ಟರೆ ಉಳಿಯುವವನು ಒಬ್ಬನೇ ನಟ. ನಟನ ಪರಿಚಯವಿಲ್ಲ ದವರಿಗೆ ರಾಮನೆ ಬೇರೆ ಕೃಷ್ಣನೆ ಬೇರೆ ಎಂದು ಮುಂತಾಗಿ ಕಾಣುತ್ತದೆ. ಆದರೆ ನಟನ ಪರಿಚಯವಿರುವವನು "ಅವನೇ ಇವನು" ಎಂದು ಭಾವಿಸುತ್ತಾನೆ. ಅವನು ಬೇರೆ ಬೇರೆ ಪಾತ್ರಗಳನ್ನೂ ನೋಡುತ್ತಾನೆ ಮತ್ತು ಆ ಪಾತ್ರಗಳ ಹಿಂದಿರುವ ನಟನನ್ನೂ ನೋಡುತ್ತಾನೆ.

ಎಲ್ಲ ಅಲೆಗಳ ಹಿಂದಿರುವ ನೀರು ಒಂದೇ ಆಗಿರುವಂತೆ ಎಲ್ಲ ನಾಮರೂಪಗಳ ಹಿಂದಿರುವ ಚೈತನ್ಯತತ್ತ್ವವೂ ಒಂದೇ ಆಗಿರಬೇಕು. ನಾಮರೂಪಗಳ ಬಹುತ್ವ ಸಾಧ್ಯವೆ ಹೊರತು ಚೈತನ್ಯದ ಬಹುತ್ವ ಸಾಧ್ಯವಿಲ್ಲ. ನಾನಾ ಚೈತನ್ಯಗಳಿರುವುದಾದರೆ ಅವುಗಳ ಬಹುತ್ವವನ್ನು ಅನುಭವಿಸುವ ಇನ್ನೊಂದು ಚೈತನ್ಯವನ್ನು ಊಹಿಸಬೇಕಾಗುತ್ತದೆ. ಆದ್ದರಿಂದ ಚೈತನ್ಯದ ಬಹುತ್ವ ಕೇವಲ ಉಪಾಧಿನಿಮಿತ್ತವಾದುದು ಎಂದು ಹೇಳಬೇಕಾಗುತ್ತದೆ—ಒಂದೇ ಸೂರ್ಯ ವಿವಿಧ ಪಾತ್ರೆ ಗಳಲ್ಲಿರುವ ನೀರಿನಲ್ಲಿ ಅನೇಕವಾಗಿ ಕಾಣುವಂತೆ. ಇದನ್ನೇ ಆಧುನಿಕ ವಿಜ್ಞಾನಿಗಳು ಸಮರ್ಥಿಸುತ್ತಿದ್ದಾರೆ.

ಭೌತವಿಜ್ಞಾನಿ ಎರ್ವಿನ್ ಶ್ರೋಡಿಂಗರ್ (*Erwin Schrodin -ger*) ಹೇಳುತ್ತಾರೆ : "ಚೈತನ್ಯವನ್ನು 'ಅನೇಕ'ವಾಗಿ ಅನುಭವಕ್ಕೆ ತಂದುಕೊಳ್ಳುವುದು ಸಾಧ್ಯವಿಲ್ಲ. 'ಏಕ'ವಾಗಿ ಅನುಭವಿಸುವುದು ಮಾತ್ರ ಸಾಧ್ಯ. .... ಇರುವುದು ಒಂದೇ ಒಂದು. ಅನೇಕ ಎಂದು ತೋರುವುದು, ಆ ಒಂದರ ಬೇರೆ ಬೇರೆ ಮುಖಗಳು, ಭ್ರಮೆ (ಭಾರತೀಯ 'ಮಾಯಾ')ಯಿಂದ ಕಲ್ಪಿತವಾದುದು." ಅವರು ತತ್ತ್ವಮಸಿ ವಾಕ್ಯವನ್ನು ಸಮರ್ಥಿಸುತ್ತ ಹೇಳುತ್ತಾರೆ: "ಪುರಾತನ ಭವ್ಯ ಉಪನಿಷತ್ತುಗಳ ಕಾಲದಿಂದಲೂ 'ಆತ್ಮ' ಎಂದರೆ 'ಬ್ರಹ್ಮ' ಎನ್ನುವ ಮಾತು ಭಾರತೀಯ ತತ್ತ್ವಶಾಸ್ತ್ರ ಚಿಂತನೆಯಲ್ಲಿ ಎಂದೂ ಧರ್ಮನಿಂದೆಯಾಗಿರಲಿಲ್ಲ—ಮಾತ್ರವಲ್ಲ ಅದು ಈ ಬ್ರಹ್ಮಾಂಡದ ವ್ಯಾಪಾರಗಳನ್ನು ಕುರಿತು ನಡೆಸಿದ ಗಾಢ ಚಿಂತನೆಗಳ ಸಾರ ಸರ್ವಸ್ವವೆಂದೇ ಪರಿಗಣಿತವಾಗಿತ್ತು."

### ಉಪಸಂಹಾರ

ಹೀಗೆ ಭೌತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ—ಈ ಮೂರೂ ಸ್ತರಗಳಲ್ಲಿ ಈ ಜಗತ್ತು ಏಕೈಕವಾಗಿದೆ. ಪ್ರತ್ಯೇಕತೆ ಒಂದು ಭ್ರಮೆ. ಈ ಪ್ರತ್ಯೇಕತೆಯ ಭಾವವೇ ಎಲ್ಲ ಗೊಂದಲಗಳಿಗೂ ಕಾರಣ. ಇದರಿಂದಲೇ ಎಲ್ಲ ಸಂಘರ್ಷಗಳೂ ರಕ್ತಪಾತಗಳೂ ಧರ್ಮ ಯುದ್ಧಗಳೂ ನಡೆಯುತ್ತಿರುವುದು. ವಿವಿಧ ಸಂಸ್ಕೃತಿಗಳು, ಜನಾಂಗಗಳು ಸಮೀಪಕ್ಕೆ ಬರುತ್ತಿರುವ ಇಂದಿನ ಸಂದರ್ಭದಲ್ಲಿ ಏಕತೆಯನ್ನು ಬೋಧಿಸುವ ಈ ತತ್ತ್ವಮಸಿ ಮಹಾವಾಕ್ಯವು ನಮ ಗೆಲ್ಲರಿಗೂ ಆವಶ್ಯಕವಾಗಿದೆ. ನಮ್ಮ ಎಲ್ಲ ಸಣ್ಣತನವನ್ನು ಮೀರಿ ವಿಶಾಲಮನೋಭಾವವನ್ನು ಪಡೆಯಲು, ನಮ್ಮ ಅಲ್ಪತೆಯನ್ನು ತೊಡೆದು ಭೂಮ ವ್ಯಕ್ತಿತ್ವವನ್ನು ಪಡೆಯಲು ಈ ಮಹಾಸಂದೇಶ ವನ್ನು ನಾವೆಲ್ಲರೂ ಅನುಸರಿಸಬೇಕು. ✻

### ರಾಣಿ ಮದಾಲಸ

**ಮದಾಲಸ ಎಂಬ ರಾಣಿಯು ಸುಂದರಿಯೂ ಬ್ರಹ್ಮಜ್ಞಾನಿಯೂ ಆಗಿದ್ದಳು. ಮಕ್ಕಳನ್ನು ಹಡೆದ ತಕ್ಷಣವೇ 'ತತ್ತ್ವಮಸಿ' ಎಂದು ಹಾಡಿ ಮಲಗಿಸುತ್ತಿದ್ದಳು . ಮಕ್ಕಳು ವಯಸ್ಸಿಗೆ ಬರುತ್ತಲೇ ಸಂನ್ಯಾಸವನ್ನು ಸ್ವೀಕರಿಸಿ ರಾಜ್ಯವನ್ನು ಬಿಟ್ಟು ಹೊರಟು ಹೋಗುತ್ತಿದ್ದರು. ಹೀಗೆ ಮೂರು ಜನ ಮಕ್ಕಳೂ ಬೆಳೆಯುತ್ತಲೆ ಸಂನ್ಯಾಸಿಗಳಾದರು. ರಾಜ ಋತಧ್ವಜನಿಗೆ ಚಿಂತೆಗಿಟ್ಟುಕೊಂಡಿತು. ರಾಜ್ಯಭಾರವನ್ನು ಮಾಡುವವರು ಯಾರು? ಬಹಳ ಯೋಚಿಸಿ ರಾಣಿಯ ಬಳಿ ಮಾತನಾಡಿ ಮುಂದಿನ ಮಗನನ್ನು ಶೈಶವದಲ್ಲೇ ತಾಯಿಯಿಂದ ದೂರ ಮಾಡಿ ಸದ್ಗುರುವಿನ ಬಳಿ ಕಳುಹಿಸಿದ. ಯಾರಿಗೂ ಕಾಣದಂತೆ ತಾಯಿಯು ಉಂಗುರದೊಳಗೆ ಒಂದು ಚಿಕ್ಕ ಕಾಗದದ ತುಂಡನ್ನಿಟ್ಟು ಹೇಳಿದಳು, 'ಮಗನೇ, ನಿನಗೆ ಎಂದಿಗಾದರೂ ಕಷ್ಟ ಬಂದಾಗ ಇದರೊಳಗೆ ಇರುವ ಚೀಟಿಯನ್ನು ತೆಗೆದು ಓದು' ಎಂದು.**

**ಬೆಳೆದು ದೊಡ್ಡವನಾದ ಬಳಿಕ ಮಗನು ರಾಜ್ಯಭಾರವನ್ನು ಮಾಡತೊಡಗಿದ. ತಂದೆತಾಯಿ ಇಬ್ಬರೂ ಕಾಡಿಗೆ ಹೋದ ಬಳಿಕ ಕಷ್ಟಗಳ ಸುರಿಮಳೆಯೆ ಸುರಿಯಿತು ರಾಜನ ಮೇಲೆ. ಆಗ ತಾಯಿಯು ಕೊಟ್ಟ ಉಂಗುರದ ನೆನಪಾಗಿ ನೋಡಲು ಅದರಲ್ಲಿ 'ದೇವರೊಬ್ಬನೇ ಸತ್ಯ, ಉಳಿದುವೆಲ್ಲಾ ಅಸತ್ಯ. ಆತ್ಮನನ್ನು ಯಾರೂ ಕೊಲ್ಲಲಾಗುವುದಿಲ್ಲ. ಒಬ್ಬನೇ ಬದುಕು ಅಥವಾ ಸಾಧು ಸಂಗ ಮಾಡು' ಎಂದು ಬರೆದಿತ್ತು. ಅದನ್ನು ಓದಿದ ತಕ್ಷಣವೇ ಆತ್ಮಜಾಗೃತಿಯಾಗಿ ಎಲ್ಲವನ್ನೂ ತ್ಯಜಿಸಿ ಸಂನ್ಯಾಸ ಸ್ವೀಕರಿಸಿದನು!**